ರಿಗೆ

ಶ್ರೀ ರಾಮನಾಥ್ ಕೋವಿಂದ್

ಮಾನ್ಯ ರಾಷ್ಟ್ರಪತಿಗಳು

ರಾಷ್ಟ್ರಪತಿ ಭವನ

ಪ್ರೆಸಿಡೆಂಟ್ಸ್ ಎಸ್ಟೇಟ್

ಹೊಸದಿಲ್ಲಿ – 110004

ದಿನಾಂಕ: ಸೆಪ್ಟಂಬರ್ 19, 2018

ವಿಷಯ: ಕೃಷಿ ಸಮಸ್ಯೆಗಳು ಮತ್ತು ಸಂಬಂಧಿತ ವಿಚಾರಗಳ ಬಗ್ಗೆ ತುರ್ತಾಗಿ ಸಂಸತ್ತಿನ ಜಂಟಿ ಅಧಿವೇಶನ ಕರೆಯಬೇಕೆಂದು ಕೋರಿಕೆ.

ಮಾನ್ಯರೆ,

ದೇಶದೊಳಗೆ ಕೃಷಿ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು ಅದು ನಾಗರಿಕತೆಯ ಮೇಲೆಯೇ ಪ್ರಭಾವ ಬೀರಬಹುದಾದಷ್ಟು ಭೂತಾಕಾರವಾಗಿ ಬೆಳೆದು ನಿಂತಿದೆ. ಈ ಹಿನ್ನೆಲೆಯಲ್ಲಿ ಈ ದೇಶದ ಕಾಳಜಿ ಹೊಂದಿದ ನಾಗರಿಕರಾಗಿ ನಾವು ಈ ಪತ್ರವನ್ನು ಬರೆಯುತ್ತಿದ್ದೇವೆ. ಕೃಷಿ ಸಮಸ್ಯೆ ಎನ್ನುವುದು ಈಗ ಕೇವಲ ಭೂಮಿ ನಷ್ಟ, ಆದಾಯ ನಷ್ಟ, ಉದ್ಯೋಗ ಅಥವಾ ಉತ್ಪಾದಕತೆಯ ನಷ್ಟದ ಸಂಗತಿಯಾಗಿ ಮಾತ್ರ ಉಳಿದಿಲ್ಲ. ಬದಲಿಗೆ ಅದು ಇಡೀ ಮಾನವೀಯತೆಯ ನಾಶಕ್ಕೆ ಎಡೆಮಾಡಿಕೊಡುತ್ತಿದೆ ಎನ್ನುವುದರತ್ತ ನಿಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇವೆ

ಸರಕಾರದ ಮೇಲೆ ಸರಕಾರಗಳು ಬಂದರೂ ಹಳ್ಳಿಗಾಡಿನ ನಾಶ ಮತ್ತು ರೈತರ ಅಸಹಾಯಕತೆಯನ್ನು ತಡೆಯಲು ಸಾಧ್ಯವಾಗಿಲ್ಲ ಮತ್ತು ಅವರ ಸಂಕಟ ನಿವಾರಿಸುವ ನಿಟ್ಟಿನಲ್ಲಿ ಏನೇನೂ ಕೆಲಸ ನಡೆದಿಲ್ಲ. ಹಿಡುವಳಿ ಕೈಜಾರುತ್ತಿರುವ ಸಂಕಟ ಆಳಗೊಳ್ಳುತ್ತಿರುವುದರ ಜೊತೆಗೇ ಕಳೆದ 20 ವರ್ಷಗಳಲ್ಲಿ 3,00,000ಕ್ಕೂ ಅಧಿಕ ಮಂದಿ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಅಖಿಲ ಭಾರತ ರೈತ ಸಂಘರ್ಷ ಸಂಯೋಜನಾ ಸಮಿತಿಯು (ಎ ಐ ಕೆ ಎಸ್ ಸಿ ಸಿ), ದೇಶದ 200ಕ್ಕೂ ಹೆಚ್ಚು ರೈತ ಸಂಘಟನೆಗಳು ಹಾಗೂ ತಮ್ಮ ಬದುಕಿಗಾಗಿ ಹೋರಾಟ ನಡೆಸುತ್ತಿರುವ ಲಕ್ಷಾಂತರ ರೈತ, ಕಾರ್ಮಿಕ ಮತ್ತು ಕೃಷಿ ಕೂಲಿ ಕಾರ್ಮಿಕರನ್ನು ಪ್ರತಿನಿಧಿಸುವ ಒಕ್ಕೂಟ. ಇದೇ ನವೆಂಬರ್ 29 ಮತ್ತು 30ರಂದು ದೆಹಲಿಗೆ 2 ದಿನಗಳ 'ರೈತ ವಿಮೋಚನಾ ಮೆರವಣಿಗೆ'ಯನ್ನು ಈ ಒಕ್ಕೂಟ ಹಮ್ಮಿಕೊಂಡಿದೆ. ಕೃಷಿ ಸಮಸ್ಯೆಗಳು ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳನ್ನು ಮಾತ್ರ ಚರ್ಚಿಸಲು 21 ದಿನಗಳ ವಿಶೇಷ ಜಂಟಿ ಸಂಸತ್ ಅಧಿವೇಶನ ನಡೆಸಬೇಕೆಂಬ ಅವರ ಬೇಡಿಕೆಯನ್ನು ಈಡೇರಿಸಬೇಕು ಎಂದು ನಾವು ಒತ್ತಾಯಿಸುತ್ತೇವೆ.

ಭಾರತದ ರಾಷ್ಟ್ರಪತಿಗಳೂ, ಸಾಂವಿಧಾನಿಕ ಮುಖ್ಯಸ್ಥರೂ ಆಗಿ ದೇಶದ ಶೇ 70ಕ್ಕೂ ಹೆಚ್ಚು ಪ್ರಜೆಗಳನ್ನು ಬೃಹತ್ ಸಂಕಷ್ಟಕ್ಕೆ ದೂಡುತ್ತಿರುವ ಈ ಬಿಕ್ಕಟ್ಟನ್ನು ನಿವಾರಿಸುವ ನಿಟ್ಟಿನಲ್ಲಿ ಸಂಸತ್ತಿನ ಜಂಟಿ ಅಧಿವೇಶನವನ್ನು ಕರೆಯಲು ತಾವು ಮಧ್ಯಸ್ಥಿಕೆ ವಹಿಸಬೇಕೆಂದು ಮನವಿ ಮಾಡುತ್ತೇವೆ. ಸರಕುಗಳು ಮತ್ತು ಸೇವಾತೆರಿಗೆ (ಜಿ ಎಸ್ ಟಿ)ಯನ್ನು ಚರ್ಚಿಸಲು ಇತ್ತೀಚೆಗೆ ನಡುರಾತ್ರಿಯಲ್ಲಿ ಜಂಟಿ ಸಂಸತ್ ಅಧಿವೇಶನ ಕರೆಯಲಾಗಿತ್ತು. ಲಕ್ಷಾಂತರ ನಾಗರಿಕರ ಸಂಕಷ್ಟಕ್ಕೆ

ಕಾರಣವಾಗಿರುವ ಸಮಸ್ಯೆಗಳ ನಿವಾರಣೆಗೆ ಸಂಸತ್ತಿನ ಜಂಟಿ ಅಧಿವೇಶನ ಕರೆಯುವುದು ಅದಕ್ಕೆ ಪರಿಹಾರ ಒದಗಿಸುವುದು ಸಂಸದೀಯ ಬದ್ಧತೆಗೆ ಸೂಚಿಯಾಗುವುದಲ್ಲದೇ ನ್ಯಾಯೋಚಿತವೂ ಅನಿಸುತ್ತದೆ.

ಹಲವಾರು ಪ್ರತಿಭಟನೆಗಳು, ದೂರುಗಳು, ರೈತ- ಕಾರ್ಮಿಕ- ಅರಣ್ಯವಾಸಿ- ಮೀನುಗಾರರ ಹಾಗೂ ದೇಶದ ಸಾಕ್ಷರತೆ ಮತ್ತು ಕಲ್ಯಾಣ ಕಾರ್ಯಕ್ರಮಗಳ ತಳಮಟ್ಟದ ಕಾರ್ಯಕರ್ತರಾಗಿರುವ – ಅಂಗನವಾಡಿ ಕಾರ್ಯಕರ್ತರ, ನೊಂದಾಯಿತ ಸಾಮಾಜಿಕ ಆರೋಗ್ಯ ಕಾರ್ಯಕರ್ತರ, ದಾದಿಯರು ಮತ್ತು ಸೂಲಗಿತ್ತಿಯರ ಸಂಕಟದ ಮೊರೆ ಇಟ್ಟರೂ ಕೃಷಿಕರ ಸಮಸ್ಯೆಯತ್ತ ಸರ್ಕಾರಗಳ ಗಮನವನ್ನು ಸೆಳೆಯಲು ಸಾಧ್ಯವಾಗಿಲ್ಲ. ಈ ಎಲ್ಲವೂ ವಿಫಲಗೊಂಡ ಬಳಿಕ ಬೇರೆ ಹಾದಿ ಕಾಣದೇ ಸಂಸತ್ತಿನ ಜಂಟಿ ಅಧಿವೇಶನ ಕರೆಯಬೇಕೆಂಬ ಬೇಡಿಕೆಯನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇವೆ.

ಗ್ರಾಮೀಣ ಭಾರತೀಯರ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಕೋರಿಕೆಗಳ ಹಿಂದಿರುವುದು ಸಾಲ ಮುಕ್ತಿ, ಬೆಳೆಗೆ ಸೂಕ್ತ ಬೆಲೆ, ನ್ಯಾಯಯುತ ಸಂಬಳ, ಉದ್ಯೋಗ, ಶಿಕ್ಷಣ ಮತ್ತು ಆರೋಗ್ಯ ಹಾಗೂ ಪೌಷ್ಟಿಕ ಆಹಾರದ ಸುರಕ್ಷೆ ಎಂಬ ವಿಚಾರವನ್ನು ತಾವು ಗುರುತಿಸಿದ್ದೀರಿ ಎಂದುಕೊಂಡಿದ್ದೇವೆ.

ಎ ಐ ಕೆ ಎಸ್ ಸಿ ಸಿ ಪರವಾಗಿ ಎರಡು ಮಸೂದೆಗಳು –ರೈತರ ಸಾಲಮುಕ್ತಿ ಮಸೂದೆ , 2018, ಮತ್ತು ಕೃಷಿ ಉತ್ಪನ್ನಗಳಿಗೆ ಸೂಕ್ತವಾದ ಕನಿಷ್ಠ ಬೆಂಬಲ ಬೆಲೆ ಒದಗಿಸುವುದನ್ನು ಖಚಿತಪಡಿಸುವ ರೈತರ ಹಕ್ಕಿನ ಮಸೂದೆ, 2018 - ಈಗಾಗಲೇ ಸಂಸತ್ತಿನಲ್ಲಿ ಮಂಡಿತವಾಗಿದ್ದು ಚರ್ಚೆಗಾಗಿ ಕಾಯುತ್ತಿವೆ. ಅವುಗಳನ್ನು ಸಂಸತ್ತು ಅಂಗೀಕರಿಸುವುದು ಕೂಡ ವಿಶೇಷ ಸಂಸತ್ ಅಧಿವೇಶನದ ಭಾಗವಾಗಬೇಕು.

ಸಮಾನತೆಯನ್ನು ಸಾಧಿಸುವ ಸಾಂವಿಧಾನಿಕ ಆಶಯಗಳನ್ನು ಎತ್ತಿಹಿಡಿಯುವ ನಿಟ್ಟಿನಲ್ಲಿ ತಾವು ಈ ವಿಶೇಷ ಕೃಷಿ ಅಧಿವೇಶನಕ್ಕೆ ಷರತ್ತುರಹಿತ ಒಪ್ಪಿಗೆ ನೀಡುತ್ತೀರಿ ಎಂದು ನಾವು ನಿರೀಕ್ಷಿಸುತ್ತೇವೆ. ದೇಶದ ಹಳ್ಳಿಗಾಡುಗಳ ರೈತರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಂಸತ್ತಿನ ವಿಶೇಷ ಅಧಿವೇಶನಕ್ಕೆ ತಾವು ಕೊಡಲಿರುವ ಒಪ್ಪಿಗೆಯು ನಮ್ಮ ಪ್ರಜಾಸತ್ತೆಯ ಅತ್ಯುನ್ನತ ಸಂದೇಶ ಎಂದು ಪರಿಗಣಿತವಾಗಲಿದ್ದು, ಜನ ಆರಿಸಿ ಕಳುಹಿಸಿದ ಜನಪ್ರತಿನಿಧಿಗಳು ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲು ಬದ್ಧರಾಗಿದ್ದಾರೆ ಎಂಬ ನಂಬಿಕೆಯನ್ನು ಜನಸಾಮಾನ್ಯರಲ್ಲಿ ಬಲಗೊಳಿಸಲಿದೆ.

ಗ್ರಾಮೀಣ ಭಾರತವು ಈ ನೆಲದ ಅತ್ಯಂತ ಸಂಕೀರ್ಣ ಭಾಗವಾಗಿದ್ದು, ವಿಶೇಷ ಅಧಿವೇಶನವು ಈ ಹಳ್ಳಿಗಾಡಿನ ಸಮಸ್ಯೆಗಳ ಸುಧಾರಣೆಗೆ ಅಗತ್ಯ ಒಳನೋಟಗಳನ್ನು ಒದಗಿಸಲಿದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇವೆ. ರೈತರ ಆತ್ಮಹತ್ಯೆಗಳು, ಹಸಿವಿನಿಂದ ಮಕ್ಕಳ ಸಾವು, ಹೆಚ್ಚುತ್ತಿರುವ ನಿರುದ್ಯೋಗ, ಸಂಘಟಿತ ಕ್ಷೇತ್ರಗಳಲ್ಲಿ ತಗ್ಗುತ್ತಿರುವ ಉದ್ಯೋಗಾವಕಾಶ, ಸಾಲದ ಹೊರೆ, ಜಾನುವಾರು ಆರ್ಥಿಕತೆಯ ವಿನಾಶ, ಮತ್ತು ಒಟ್ಟಾರೆ ಅಸ್ಥಿರತೆಗಳ ಕಾರಣದಿಂದಾಗಿ ಕೃಷಿ ಸಂಪೂರ್ಣವಾಗಿ ಕುಸಿದಿದೆ. ಇದರ ಫಲವಾಗಿ ನಮ್ಮ ಹೆಮ್ಮೆಯ ಅನ್ನದಾತರು ಈಗ ಇನ್ನೊಬ್ಬರ ಮನೆಕೆಲಸದ ಆಳುಗಳಾಗಿ, ದಿನಗೂಲಿ ಕಾರ್ಮಿಕರಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. 1991ಕ್ಕೆ ಹೋಲಿಸಿದರೆ 2011ರ ಜನಗಣತಿಯ ವೇಳೆಗೆ ದೇಶದಲ್ಲಿ ರೈತರ ಸಂಖ್ಯೆ ಒಂದೂವರೆ ಕೋಟಿಯಷ್ಟು ಇಳಿಕೆ ಕಂಡಿದೆ ಎಂಬ ಒಂದು ವಿಚಾರವೇ ಸಂಪೂರ್ಣ ಪರಿಸ್ಥಿತಿಯ ಚಿತ್ರಣವನ್ನು ನೀಡಬಲ್ಲುದು. ಈ ರೀತಿಯ ಸಂಕಟ ಮೂಲದ ವಲಸೆಗಳು ದೇಶದ ಆಹಾರ ಸುರಕ್ಷತೆ ಮತ್ತು ಸಮಗ್ರ ಆಹಾರ ಸಾರ್ವಭೌಮತ್ವಕ್ಕೆ ಕೊಡಲಿಯೇಟು ನೀಡುತ್ತಿವೆ ಎಂಬುದು ಅದರ ಸ್ವರೂಪದಿಂದಲೇ ವ್ಯಕ್ತಗೊಳ್ಳುತ್ತಿದೆ.

ಇಷ್ಟಲ್ಲದೇ, ಈ ಕೃಷಿ ಸಮಸ್ಯೆಗಳ ಕುರಿತಾದ ವಿಶೇಷ ಅಧಿವೇಶನವು ಅದರಿಂದ ಸಮಸ್ಯೆಗಳಿಗೀಡಾದವರ ಧ್ವನಿಯಾಗುವುದನ್ನು ಖಚಿತಪಡಿಸಿಕೊಳ್ಳುವಲ್ಲೂ ತಮ್ಮ ಹಸ್ತಕ್ಷೇಪದ ಅಗತ್ಯವಿದೆ. ಅವರ ಮೊರೆಯನ್ನು ಸಂಸತ್ತಿನೊಳಗಿನಿಂದ ದೇಶ ಕೇಳಬೇಕಿದೆ. ಈ ಅಧಿವೇಶನವು ರೈತರಿಗೆ ವಿನಾಶಕ ಕೃಷಿ ನೀತಿಗಳ ಬಗ್ಗೆ, ಗ್ರಾಮೀಣ ಭಾಗಗಳಲ್ಲಿ ಸಾಲವಾಗಲೀ, ನ್ಯಾಯಬೆಲೆಯಾಗಲೀ ಸಿಗದಿರುವ ಬಗ್ಗೆ, ನೀರು, ಆರೋಗ್ಯ ಮತ್ತು ಶಿಕ್ಷಣಗಳನ್ನು ಖಾಸಗೀಕರಣಗೊಳಿಸುತ್ತಿರುವ ಕ್ರೌರ್ಯದ ಬಗ್ಗೆ ಸಂಸತ್ತಿನ ನೆಲದಿಂದಲೇ ಜನಸಮುದಾಯದ ಮತ್ತು ಜನಪ್ರತಿನಿಧಿಗಳ ಗಮನ ಸೆಳೆಯಲು ಅವಕಾಶ ಮಾಡಿಕೊಡಲಿದೆ. ರಾಷ್ಟ್ರೀಯ ರೈತ ಆಯೋಗವು 2006ರಲ್ಲಿ ನಿಡಿದ ಮೂಲಭೂತ ಪರಿಣಾಮಗಳನ್ನು

ಬೀರಬಲ್ಲ ಶಿಫಾರಸುಗಳಾಗಲೀ, ಆ ಬಳಿಕ ಬಂದ, ಈಗ ವಾಯಿದೆ ತೀರಿರುವ, ಮಹಿಳಾ ರೈತರ ಹಕ್ಕುಗಳ ಮಸೂದೆಯಾಗಲೀ ಸರಿಯಾದ ಹಾದಿಯಲ್ಲೇ ಇಟ್ಟ ಹೆಜ್ಜೆಗಳಾಗಿದ್ದರೂ, ಅನುಷ್ಠಾನಕ್ಕೆ ಬರಲೇ ಇಲ್ಲ.

ರೈತ ಮಹಿಳೆಯರ ಶ್ರಮವು ದೇಶದ ಗ್ರಾಮೀಣ ಆರ್ಥಿಕತೆಯನ್ನು ಎತ್ತಿ ಹಿಡಿಯುತ್ತಿದೆಯಾದರೂ ಅದನ್ನು ಇಲ್ಲಿಯವರೆಗೂ ಸ್ಮರಿಸುವ ಕೆಲಸ ನಡೆದಿಲ್ಲ. ಜಂಟಿ ಸಂಸತ್ ಅಧಿವೇಶನದಲ್ಲಿ ತಾವು  ಈ ವಿಚಾರಕ್ಕೆ ಒತ್ತಾಸೆಯಾಗಿ ನಿಲ್ಲಬೇಕು. ಅಲ್ಲದೇ ಭೂರಹಿತ ರೈತರು, ಗೇಣಿದಾರ ರೈತರು, ಕೃಷಿ ಕಾರ್ಮಿಕರು, ದಲಿತ ಮತ್ತು ಆದಿವಾಸಿ ರೈತರು ಮಾತ್ರವಲ್ಲದೇ ವಿಭಿನ್ನ ಪೂರಕ ವೃತ್ತಿಗಳಲ್ಲಿ ತೊಡಗಿರುವ ಅಲ್ಪಸಂಖ್ಯಾತ ಗುಂಪುಗಳ ಹೆಚ್ಚುತ್ತಿರುವ ಸಮಸ್ಯೆಗಳನ್ನು ಸಂಸತ್ತು ಕೇಳಿ, ದಾಖಲಿಸಿಕೊಂಡು, ಪರಿಹಾರ ಸೂಚಿಸುವಂತಾಗಬೇಕು.

2018 ಮಾರ್ಚ್ ತಿಂಗಳಲ್ಲಿ ಮಹಾರಾಷ್ಟ್ರದ ಸುಮಾರು 40,000 ರೈತರು ನಾಸಿಕ್ ನಿಂದ ಕಾಲ್ನಡಿಗೆಯಲ್ಲಿ ಬಂದು, ಮುಂಬೈ ರಾಜ್ಯ ವಿಧಾನಮಂಡಲಕ್ಕೆ ಮುತ್ತಿಗೆ ಹಾಕಿದ್ದರು ಅಲ್ಲದೇ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸುವ ಮೂಲಕ ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ತಮ್ಮ ನಂಬಿಕೆಯನ್ನು  ವ್ಯಕ್ತಪಡಿಸಿದ್ದರು. ಎ ಐ ಕೆ ಎಸ್ ಸಿ ಸಿ ನವೆಂಬರ್ ನಲ್ಲಿ ಆಯೋಜಿಸಿರುವ ದಿಲ್ಲಿಗೆ ದಂಡಯಾತ್ರೆಯ ಬಳಿಕ, ರೈತ ಸಮುದಾಯದವರು ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟು ಕೈಗೊಂಡಿರುವ ಈ ಕ್ರಮವನ್ನು ಸ್ವಾಗತಿಸುವ ಮತ್ತು ಪರಿಗಣಿಸುವ ಕರ್ತವ್ಯವನ್ನು ದೇಶದ ಸಂವಿಧಾನದ ರಕ್ಷಕರಲ್ಲಿ ಅತ್ಯುನ್ನತರಾದ ತಾವು ನಿಭಾಯಿಸಬೇಕೆಂದು ನಾವು ಕೋರಿಕೊಳ್ಳುತ್ತಿದ್ದೇವೆ. ಯಾಕೆಂದರೆ ರೈತರೇ ಈ ದೇಶದ ಅನ್ನದಾತರಾಗಿ ದೇಶವನ್ನು ಸಲಹುವವರು ಮಾತ್ರವಲ್ಲದೇ ನಿಜಾರ್ಥದಲ್ಲಿ ದೇಶದ ಪ್ರಜಾತಂತ್ರವನ್ನು ಜೀವಂತವಾಗಿ ಉಳಿಸುವವರು.

ವಿಶ್ವಾಸಗಳೊಂದಿಗೆ,

ದೇಶದ ಕಳಕಳಿಯುಳ್ಳ ನಾಗರಿಕರು